ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **20-06-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಕೆ ವಿ ಬಿ ವಕೀಲರಿಂದ -

ನನಗೆ ಆರೋಪಿಯ ಪರಿಚಯ ಸುಮಾರು **2006-07, 2007-08** ನೇ ಇಸವಿಯಿಂದ ಇರುತ್ತದೆ. ಅವರು ಮೊದಲು ಕಬ್ಬಿಣದ ವ್ಯಾಪಾರ ಮಾಡುತ್ತಿದ್ದರು ಈಗ ಹೊಟೇಲ್ ವ್ಯವಹಾರ ನಡೆಸುತ್ತಾರೆ. ಅವರ ಹೊಟೇಲ್ ಹೆಸರು ಮೊದಲಿಗೆ ಕೆ.ಎಫ್.ಸಿ ಆಗಿತ್ತು. ಈಗ ಅದರ ಹೆಸರು ಅರಬಿಯನ್ ಟ್ರಿಟ್ ಆಗಿರುತ್ತದೆ. ನಾನೂ ಸಿ.ಎ ಮಾಡಿರುತ್ತೇನೆ. ಹೀಗಾಗಿ ಆಡಿಟ್ ಕೆಲಸ ಮಾಡುತ್ತೇನೆ. ಆರೋಪಿ ತನ್ನ ಹೊಟೇಲ್ ವ್ಯವಹಾರ ನಡೆಸಲು ಪ್ರಾರಂಭ ಮಾಡಿದಾಗಿನಿಂದ ನಾನು ಸದರಿ ವ್ಯವಹಾರದ ಆಡಿಟ್ ಕೆಲಸ ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರೆದು ಇತ್ತಿಚಿಗೆ **2** ವರ್ಷಗಳಿಂದ ಅಂದರೆ **2023** ನೇ ಇಸವಿಯಿಂದ ನಾನು ಅವರ ವ್ಯವಹಾರದ ಆಡಿಟ್ ಕೆಲಸ ಮಾಡುತ್ತಿಲ್ಲ.

ನಾನು ಮೊದಲಿಗೆ ಸಲ್ಲಿಸಿದ ದೂರಿನಲ್ಲಿ ಮೊತ್ತವನ್ನು ತಪ್ಪಾಗಿ ರೂ. **42,50,000/-** ಎಂದು ನಮೂದು ಮಾಡಿದ್ದೆ. ಸದರಿ ತಪ್ಪು ಗಣಕೀಯ ತಪ್ಪಾಗಿರುತ್ತದೆ. ನಾನು ಆರೋಪಿಯ ಹೊಟೇಲ್ ವ್ಯವಹಾರದ ಆದಾಯ ತೆರಿಗೆ ತಯಾರಿಸುತ್ತಿದ್ದು, ಆರೋಪಿ ಅದರ ಪಾವತಿ ಮಾಡುತ್ತಿದ್ದರು. ಆದಾಯ ತೆರಿಗೆಯನ್ನು ನಾನು ತಯಾರಿಸಿದ ನಂತರ ಆರೋಪಿಯಿಂದ ಖಾಲಿ ಚೆಕ್ ಗಳನ್ನು ನಾನು ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ಬಾರಿ ಆರೋಪಿ ನನಗೆ ಸಹಿ ಮಾಡಿ ಖಾಲಿ ಚೆಕ್ ಕೊಟ್ಟಿದ್ದರು ಆದರೆ ಸದರಿ ಚೆಕ್ ನ್ನು ಸಾಲದ ಪಾವತಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನಾನು ಸಾಲವನ್ನು ಕೊಡುವಾಗ ಅದರ ಭದ್ರತೆಗೆ ಆರೋಪಿಯಿಂದ ಯಾವುದೇ ದಾಹಲೆಯನ್ನು ಪಡೆದಿರಲಿಲ್ಲ. ಆರೋಪಿ **2011-12** ಇಸವಿಯಿಂದ **2022-23** ನೇ ಇಸವಿಯವರೆಗೆ ನನ್ನಿಂದ ಸಾಲ ಪಡೆಯುತ್ತಲೇ ಇದ್ದರು. ಆರೋಪಿ ಪಡೆದ ಸಾಲವನ್ನು ಮರು ಪಾವತಿ ಮಾಡುತ್ತಿರಲಿಲ್ಲ, ಆದರೂ ಸಹ ನಾನು ಅವರಿಗೆ ಸಾಲ ಕೊಡುತ್ತಿದ್ದೆ. ಆರೋಪಿ ಪಡೆಯುತ್ತಿದ್ದ ಸಾಲವನ್ನು ಮರುಪಾವತಿ ಮಾಡದೆ ಇದ್ದಾಗ ನಾನು ಈ ಹಿಂದೆ ಅವರ ವಿರುದ್ಧ ಕಾನೂನು ಕ್ರಮ

ಜರುಗಿಸಿರಲಿಲ್ಲ. ಆರೋಪಿಯಿಂದ ಖಾಲಿ ಚೆಕ್ ಗಳನ್ನು ಆದಾಯ ತೆರಿಗೆ ಪಾವತಿಗೋಸ್ಕರ ಪಡೆದು ಆದಾಯ ತೆರಿಗೆಯನ್ನು ನಾನೇ ಇಲಾಖೆಗೆ ಪಾವತಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆದಾಯ ತೆರಿಗೆಯ ಪಾವತಿ ಆನ್ ಲೈನ್ ಮುಖಾಂತರ ಆಗುತ್ತದೆ ಎಂದು ನುಡಿಯುತ್ತಾರೆ. 2006 ನೇ ಇಸವಿಯಲ್ಲಿಯೂ ಸಹ ಆದಾಯ ತೆರಿಗೆಯನ್ನು ಅನ್ ಲೈನ್ ಮೂಲಕ ಪಾವತಿಸಲಾಗುತ್ತಿತ್ತು.

ನಾನು ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಆದಾಯ ತೆರಿಗೆ ಪಾವತಿಗೆಂದು ಪಡೆದ ಖಾಲಿ ಚೆಕ್ ಗಳನ್ನು ದೂರಪಯೋಗ ಪಡೆಸಿಕೊಂಡು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಹೊಟೇಲ್ ವ್ಯವಹಾರದ ಬಿಲ್ ಪುಸ್ತಕ, ಇನ್‌ವಾಯಿಸ್, ಖಾಲಿ ಚೆಕ್‌ಗಳು ಇನ್ನೂ ನನ್ನ ಬಳಿ ಇವೆ ಎಂದರೆ ಸಾಕ್ಷಿ ಎರಡು ವರ್ಷಗಳ ಹಿಂದೆ ನಾನು ಆರೋಪಿಯ ಹೊಟೇಲ್ ವ್ಯವಹಾರದ ಎಲ್ಲಾ ದಾಖಲೆಗಳನ್ನು ಅವರಿಗೆ ಕೊಟ್ಟಿದ್ದೆ, ಹಾಗೂ ಅವರಿಂದ ಯಾವುದೇ ಖಾಲಿ ಚೆಕ್ ಗಳನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಆರೋಪಿಗೆ ಹೊಟೇಲ್ ವ್ಯವಹಾರದ ದಾಖಲೆಗಳನ್ನು ವಾಪಸ್ಸು ಕೊಟ್ಟಿದಕ್ಕೆ ಅವರಿಂದ ಯಾವುದೇ ಹಿಂಬರಹವನ್ನು ಪಡೆದಿಲ್ಲ. ನನಗೆ ಆರೋಪಿಯ ಪರಿಚಯ ನಮ್ಮ ಕಾಮನ್ ಫ್ರೆಂಡ್ ಆದ ಬಶೀರವರಿಂದ ಅಯಿತು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.